
## ಮಾದಲಾಂಬಿಕೆ ಸ್ಮಾರಕ



ವಿಶ್ವಗುರು ಬಸವಣ್ಣನವರ ತಾಯಿ ಮಾದಲಾಂಬಿಕೆ ವಾಸಿಸಿದ ಮನೆಯು ಸ್ಮಾರಕವಾಗಿ ನಿರ್ಮಾಣವಾಗಿದೆ. ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕು ಕೇಂದ್ರದಿಂದ 10 ಕಿ.ಮೀ. ದೂರದಲ್ಲಿರುವ ಇಂಗಳೇಶ್ವರ ಗ್ರಾಮದಲ್ಲಿ ಬಸವಣ್ಣನವರ ತಾಯಿ ಮಾದಲಾಂಬಿಕೆ ಸ್ಮಾರಕ ಮನೆಯನ್ನು ಸರ್ಕಾರ 2010 ರಲ್ಲಿ ಭವ್ಯವಾಗಿ ನಿರ್ಮಿಸಿದೆ. ಆಗಿನ ಕಾಲದ ಮನೆಯ ರೀತಿಯಲ್ಲಿ ನಿರ್ಮಿಸಿದ್ದು, ಸ್ಮಾರಕ ಪ್ರವೇಶಿಸುತ್ತಿದ್ದಂತೆ ಎದುರಿಗೆ ಮಾದಲಾಂಬಿಕೆ ಬಾಲ ಬಸವಣ್ಣನನ್ನು ಎತ್ತಿಕೊಂಡ ಹಾಗೂ ಪಕ್ಕದಲ್ಲಿಯೇ ಬಸವಣ್ಣನವರ ಅಕ್ಕ ಅಕ್ಕನಾಗಮ್ಮ ನಿಂತಿರುವ ಮೂರ್ತಿ, ಸಭಾ ಭವನ ನೋಡುಗರ ಗಮನ ಸೆಳೆಯುತ್ತದೆ.

**–ಗುರುರಾಜ ಬ ಕನ್ನೂರ, ವಿಜಯಪುರ**




## ಲಡಾಖ್‌ನ ಖರ್ಡೋಂಗಲಾ ಪಾಸ್

ಲಡಾಖ್ ಹಿಮಾಲಯದ ಪ್ರಕೃತಿ ಸೌಂದರ್ಯದ ತವರು. ಮುಗಿಲಿಗೆ ಮುತ್ತಿಡುವ ಶಿಖರಗಳು. ಅವುಗಳಿಗೆ ಹಿಮದ ಬೆಳ್ಳಿಯ ಕವಚ. ನೋಡಿದರೆ ಮತ್ತೆ ನೋಡುವ ಆಸೆ ಚಿಗುರುವುದು.

ಇಲ್ಲಿರುವ ಪ್ರೇಕ್ಷಣೀಯ ಸ್ಥಳಗಳು ಆಕರ್ಷಕವಾಗಿವೆ. ಅವುಗಳಲ್ಲಿ 18,350 ಅಡಿ ಎತ್ತರದ ಖರ್ಡೋಂಗಲಾ ಪಾಸ್ ವಿಶ್ವದಲ್ಲಿಯೇ ಅತಿ ಎತ್ತರದ ವಾಹನ ಸಂಚಾರವಿರುವ ಪ್ರದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಲ್ಲದೆ ಇದು ಪುರಾತನದ 'ಸಿಲ್ಕ್ ರೂಟ್'ನ ಒಂದು ಭಾಗವಾಗಿದೆ ಎಂಬುದು ವಿಶೇಷ.

ಹವಾಮಾನ ಅನುಕೂಲವಾಗಿದ್ದರೆ ಸಾವಿರಾರು ಪ್ರವಾಸಿಗರ ವಾಹನಗಳು ಸಾಗುತ್ತವೆ. ಇವುಗಳಿಗೆ ಬೆಂಗಾವಲಾಗಿ ಹಾಗೂ ರಕ್ಷಣೆಗಾಗಿ ಸೈನಿಕರ ವಾಹನಗಳು ಇರುತ್ತವೆ. ಸದಾ ಹಿಮದಿಂದ ಇರುವ ಈ ಪ್ರದೇಶದಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆ ಇರುವುದರಿಂದ ಉಸಿರಾಟದ ತೊಂದರೆಯಾಗಬಹುದು. ಆಮ್ಲಜನಕದ ಸಿಲಿಂಡರ್ ಜೊತೆಗೆ ಇರುವುದು ಒಳ್ಳೆಯದು.

**–ಮೋಹನ್ ಭಟ್, ಕಾರವಾರ**

## ಹೊಟ್ಟೆಪಾಡಿಗಾಗಿ ಹಗಲುವೇಷ



ಜನಪದ ಕಲಾ ಪ್ರಕಾರಗಳಲ್ಲಿ ಹಗಲುವೇಷವೂ ಒಂದಾಗಿದ್ದು ನೂರಾರು ವರ್ಷಗಳಷ್ಟು ಪುರಾತನ ಇತಿಹಾಸವನ್ನು ಈ ಕಲೆ ಹೊಂದಿದೆ. ನಮ್ಮ ನೆಲದ ಸಾಂಸ್ಕೃತಿಕ, ಪಾರಂಪರಿಕ ಕುರುಹುಗಳನ್ನು ಕಾಪಾಡುವುದರ ಮೂಲಕ ತಮ್ಮ ಹೊಟ್ಟೆಪಾಡಿಗಾಗಿ ಹಾಡುತ್ತಾ ನಾಟಕ, ನೃತ್ಯದ ಮೂಲಕ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳನ್ನು ಮನೆಮನೆ ಅಂಗಳಕ್ಕೆ ಕೊಂಡೊಯ್ದ ಕೀರ್ತಿ ಹಗಲುವೇಷಧಾರಿಗಳಿಗಿದೆ. ಆಧುನಿಕ ಭರಾಟೆ, ಮನರಂಜನಾ ಕ್ಷೇತ್ರದಲ್ಲಿನ ತಂತ್ರಜ್ಞಾನದ ಹಸ್ತಕ್ಷೇಪದಿಂದಾಗಿ ಇಂದು ಈ ಜನಪದ ಕಲೆ ಮೂಲೆಗೆ ಸರಿಯುತ್ತಿದ್ದು ಕೆಲವೇ ಕೆಲವು ಮೂಲ ಕುಟುಂಬಗಳು ಮಾತ್ರ ಈ ಹಗಲುವೇಷ ಕಲೆಯನ್ನು ಇಂದು ಮನೆಮನೆಗೆ ತೆರಳಿ ಪ್ರದರ್ಶಿಸಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ.

**ಚಿತ್ರ- ಬರಹ: ಪ.ನಾ.ಹಳ್ಳಿ.ಹರೀಶ್ ಕುಮಾರ್, ತುಮಕೂರು**